ಕರ್ನಾಟಕ ಸರಕಾರ

# ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

" **ಅಭಿವೃದ್ಧಿ ಭವನ** " ಐವಾನ-ಎ-ಶಾಹಿ, ಕಲಬುರಗಿ - 585 102

ದೂರವಾಣಿ : (08472) - 256767, 239556, 223606 - ಫ್ಯಾಕ್ಸ : (08472) 227527

E-mail : hkadbgulb@gmail.com, hkrdbklb@gmail.com Website : hkrdb.kar.nic.in

ಸಂಖ್ಯೆ:ಯೋಜನೆ/ಮ್ಯಾಕ್ರೋ/ಸಾಮನ್ಯ/46/2017-18 /1137 ದಿನಾಂಕ: 16-08-2017 18

**-: ಸುತ್ತೋಲೆ:-**

ವಿಷಯ: ಹೈ.ಕ.ಪ್ರ.ಅ.ಮಂಡಳಿಯಿಂದ ನಗರ/ಪಟ್ಟಣ ಪ್ರದೇಶದ ವಾರ್ಡಗಳಲ್ಲಿನ ಒಳ ರಸ್ತೆ ಕಾಮಗಾರಿಗಳು ತೆಗೆದುಕೊಳ್ಳದೆ ಇರುವ ಕುರಿತು.

ಉಲ್ಲೇಖ: ಮಂಡಳಿಯ ಸುತ್ತೋಲೆ ಸಂಖ್ಯೆ: ಹೈಕಮಂ/ಯೋಶಾ/ಕ್ರಿಯೋ/ಸಾಮನ್ಯ/46/2017-18/960 ದಿನಾಂಕ: 7/10-7-2017

*****

ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕ್ರಿಯಾ ಯೋಜನೆಯಲ್ಲಿ ನಗರ/ಪಟ್ಟಣ ಪ್ರದೇಶದ ವಾರ್ಡಗಳಲ್ಲಿನ ಒಳ ರಸ್ತೆಗಳು ಪ್ರಸ್ಥಾಪಿಸಲಾಗಿರುತ್ತದೆ. ಲೇಔಟ್‌ಗಳಲ್ಲಿ ಮುಂಚಿತವಾಗಿ ರಸ್ತೆ ಮತ್ತು ಚರಂಡಿ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡ ಮೇಲೆ ಸದರಿ ಲೇಔಟಗಳನ್ನು ನಗರ/ಪಟ್ಟಣ ಪ್ರದೇಶಕ್ಕೆ ಹಸ್ತಾಂತರಿಸಲಾಗುತ್ತದೆ. ಲೇಔಟಗಳಲ್ಲಿ ಅಭಿವೃದ್ದಿ ಕೈಗೊಳ್ಳದೇ ಇದ್ದಲ್ಲಿ, ಅಭಿವೃದ್ಧಿ ಶುಲ್ಕವನ್ನು ಪಡೆದು ನಗರ/ಪಟ್ಟಣ ಪ್ರದೇಶದ ವ್ಯಾಪ್ತಿಗೆ ತೆಗೆದುಕೊಳ್ಳಲಾಗುತ್ತಿದೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸ್ವಂತ ಸಂಪನ್ಮೂಲಗಳಿಂದ ಕೈಗೊಳ್ಳಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಸದರಿ ವಾರ್ಡಗಳಲ್ಲಿನ ರಸ್ತೆಗಳ ನಿರ್ವಹಣೆಯನ್ನು ಮನೆ ತೆರಿಗೆ ಹಾಗೂ ಇತರೆ ತೆರಿಗೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲಗಳಿಂದ ಕೈಗೊಳ್ಳಬೇಕಾಗಿರುತ್ತದೆ.

ನಗರ ಸ್ಥಳೀಯ ಸಂಸ್ಥೆಗಳು ಮನೆ ತೆರಿಗೆ ಹಾಗೂ ಇತರೆ ತೆರಿಗೆಗಳೊಂದಿಗೆ ಸ್ವಂತ ಸಂಪನ್ಮೂಲಗಳಿದ್ದರು ಕೂಡ ನಗರ/ಪಟ್ಟಣ ಪ್ರದೇಶದ ವಾರ್ಡಗಳಲ್ಲಿನ ಒಳ ರಸ್ತೆಗಳ ಕಾಮಗಾರಿಗಳನ್ನು ಕೈಗೊಳ್ಳಲು ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಪ್ರಸ್ಥಾಪಿಸಲಾಗಿರುತ್ತದೆ. ಆದರೆ ಮೇಲೆ ವಿವರಿಸಿದ ಹಾಗೆ ಸದರಿ ರಸ್ತೆ ಅಭಿವೃಧಿ ಕಾಮಗಾರಿಗಳು ರಿಪೇರಿ ಅಂತಹ ಸ್ವರೂಪದ ಕಾಮಗಾರಿಗಳಾಗಿರುತ್ತವೆ ಅಥವಾ ಸ್ಥಳೀಯ ಸಂಸ್ಥೆಗಳ ಜವ್ಹಾದಾರಿ ವ್ಯಾಪ್ತಿಯಲ್ಲಿ ಬರುತ್ತವೆ. ದಿನಾಂಕ: 30-06-2014 ರಂದು ಜರುಗಿದ ಮಂಡಳಿಯ ಸಭೆಯ ನಡುವಳಿಕೆಗಳನ್ವಯ ವಿಷಯ ಸಂಖ್ಯೆ 5 VII ರಲ್ಲಿ ನಿರ್ಣಯಿಸಿರುವಂತೆ **"ರಿಪೇರಿ / ದುರಸ್ಥಿ ಕಾಮಗಾರಿಗಳಿಗೆ ಅವಕಾಶ ಇರುವುದಿಲ್ಲ"** ಎಂದು ತೀರ್ಮಾನಿಸಿದ ಹಿನ್ನಲೆಯಲ್ಲಿ ಇಂತಹ ರಸ್ತೆಗಳನ್ನು ಮಂಡಳಿಯ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಸೂಕ್ತವಾಗುವುದಿಲ್ಲ.

ಆದ್ದರಿಂದ ಪ್ರಸ್ಥಾವನೆಗಳು ಸಲ್ಲಿಸುವಾಗ ಸದರಿ ಕಾಮಗಾರಿಗಳನ್ನು ಪ್ರಸ್ಥಾಪಿಸದೇ ಇರಲು ತಿಳಿಸಲಾಗಿದೆ.

ಕಾರ್ಯದರ್ಶಿಗಳು,
ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ

**ಇವರಿಗೆ,**

1) ಎಲ್ಲಾ ಜಿಲ್ಲಾಧಿಕಾರಿಗಳು, ಹೈ.ಕ.ವಿಭಾಗ,
2) ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು, ಹೈ.ಕ.ವಿಭಾಗ.
3) ಎಲ್ಲಾ ಅನುಷ್ಠಾನ ಅಧಿಕಾರಿಗಳು, ಹೈ.ಕ.ವಿಭಾಗ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

18/8/17